ಕರ್ನಾಟಕ ಸರ್ಕಾರ

**ಕಾಲೇಜು ಶಿಕ್ಷಣ ಇಲಾಖೆ**

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಶೇಷಾದ್ರಿ ರಸ್ತೆ, ಬೆಂಗಳೂರು-560001.

ಸಂಖ್ಯೆ: ಕಾಶಿಇ/ಶೈವಿ/276/ಪು.ಖ/2019-20 ದಿನಾಂಕ: 09.09.2022.

## ಸುತ್ತೋಲೆ

ವಿಷಯ: ರಾಜ್ಯದ ಎಲ್ಲಾ ಕಾಲೇಜುಗಳಲ್ಲಿ ಡಾ.ದೊಡ್ಡರಂಗೇಗೌಡರ ಜೀವನ ಚರಿತ್ರೆ, ಪುನೀತ್ ರಾಜ್‌ಕುಮಾರ್ ರವರ ಜೀವನಾಧಾರಿತ ಪುಸ್ತಕ, ಅಲ್ಲಮಪ್ರಭು ದೇವರು ಕೃತಿಗಳನ್ನು ಖರೀದಿಸಲು ಅನುಮತಿ ನೀಡುವಂತೆ ಕೋರಿರುವ ಕುರಿತು.

ಉಲ್ಲೇಖ:1. ಮಾನ್ಯ ಉನ್ನತ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿಗಳ ಟಿಪ್ಪಣಿ ಸಂಖ್ಯೆ:HrEdn, IT&BT,S&T,SD/PS/5189/2022-23 dt:27.07.2022.
2. ಲೇಖಕರು ಮತ್ತು ಪ್ರಕಾಶಕರು, ಕಾವ್ಯಸ್ಪಂದನ ಪಬ್ಲಿಕೇಷನ್, ರವರ ಪತ್ರ ದಿನಾಂಕ:26.07.2022.

* * * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಡಾ. ಭದ್ರಾವತಿ ರಾಮಾಚಾರಿಯವರು, ಪದ್ಮಶ್ರೀ ಪುರಸ್ಕೃತ ಸಾಹಿತಿ ಮತ್ತು ಮಾಜಿ ವಿಧಾನ ಪರಿಷತ್ ಸದಸ್ಯರಾದ ಡಾ.ದೊಡ್ಡರಂಗೇಗೌಡರ ಹಳ್ಳಿಹೈದ ಎಂಬ ಜೀವನ ಚರಿತ್ರೆಯನ್ನು, ಅಪ್ಪು ಅಮರ ಎಂಬ ಕೃತಿಯನ್ನು ಹಾಗೂ ಕರ್ನಾಟಕರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯ, ವಿಜಯಪುರ ಇಲ್ಲಿ ನಿವೃತ್ತ ಪ್ರಾಧ್ಯಾಪಕರಾಗಿ ಮತ್ತು ಎಮೆರಿಟಸ್ ಪ್ರೊಫೆಸರ್ ಆಗಿ ಸೇವೆ ಸಲ್ಲಿಸಿದ ಡಾ.ವಿಜಯಾದೇವಿಯವರು ರಚಿಸಿದ ಅಲ್ಲಮಪ್ರಭು ದೇವರು: ಚರಿತ್ರೆ, ಸಂಸ್ಕೃತಿ, ಜ್ಞಾನದ ಶೋಧಗಳು ಎಂಬ ಮೌಲ್ಯಾಧಾರಿತ ಕೃತಿಗಳು ವಿದ್ಯಾರ್ಥಿಗಳಲ್ಲಿ ಮಾನವೀಯ ಮೌಲ್ಯದ ಜೊತೆಗೆ ಸಾಮಾಜಿಕ ಕಳಕಳಿಯನ್ನು ಬಿತ್ತುವುದರಲ್ಲಿ, ಪರಿಸರ ಪ್ರಜ್ಞೆ ಮೂಡಿಸುವುದರಲ್ಲಿ, ಬಹುಶಿಸ್ತೀಯ ಆಕರಗಳನ್ನು ಅನುಲಕ್ಷಿಸಿ, ಬಹುಮುಖೀ ಆದ ನೆಲೆಯಲ್ಲಿ ಅಧ್ಯಯನಕ್ಕೆ ಪೂರಕವಾಗಲಿರುವುರಿಂದ ಸದರಿ ಕೃತಿಗಳನ್ನು ರಾಜ್ಯದ ಎಲ್ಲಾ ಕಾಲೇಜುಗಳಲ್ಲಿ ಖರೀದಿಸಲು ಅನುಮತಿ ನೀಡುವಂತೆ ಉಲ್ಲೇಖಿತ ಪತ್ರಗಳಲ್ಲಿ ಕೋರಿರುತ್ತಾರೆ.

ಈ ಸಂಬಂಧ, **ಹಳ್ಳಿಹೈದ, ಅಪ್ಪುಅಮರ ಮತ್ತು ಅಲ್ಲಮ ಪ್ರಭುದೇವರು** ಕೃತಿಗಳು ಕಾಲೇಜಿನ ವಿದ್ಯಾರ್ಥಿಗಳಗೆ / ಅಧ್ಯಾಪಕರುಗಳಿಗೆ ಉಪಯುಕ್ತವಾಗಿದ್ದಲ್ಲಿ ಕಾಲೇಜಿನ ಗ್ರಂಥಾಲಯ ಪುಸ್ತಕ ಸಮಿತಿಯು ಪರಿಶೀಲಿಸಿ, ಅಗತ್ಯವಿದ್ದಲ್ಲಿ ವಾಚನಾಲಯ ಖಾತೆಯಲ್ಲಿನ ಅನುದಾನದ ಲಭ್ಯತೆ ಮೇರೆಗೆ ನಿಯಮಾನುಸಾರ ಗ್ರಂಥಾಲಯಕ್ಕೆ ಖರೀದಿಸಲು ಅನುಮತಿ ನೀಡಲಾಗಿದೆ.

<u>ಹೆಚ್ಚಿನ ಮಾಹಿತಿಗಾಗಿ:</u>

ಡಾ. ಭದ್ರಾವತಿ ರಾಮಾಚಾರಿ, ಲೇಖಕರು ಮತ್ತು ಪ್ರಕಾಶಕರು, # 53, 5ನೇ ಟೆಂಪಲ್ ರಸ್ತೆ, ಸಿದ್ಧಾಂತಿ ಬ್ಲಾಕ್, ಮಲ್ಲೇಶ್ವರಂ, ಬೆಂಗಳೂರು-03 ಮೊ.ಸಂ:8861495610, 8073147961 ರವನ್ನು ಸಂಪರ್ಕಿಸಬಹುದಾಗಿದೆ.

ಕಾಲೇಜು ಶಿಕ್ಷಣ ನಿರ್ದೇಶಕರು

<u>ಇವರಿಗೆ:</u>

ರಾಜ್ಯದ ಎಲ್ಲಾ ಸರ್ಕಾರಿ ಹಾಗೂ ಖಾಸಗಿ ಅನುದಾನಿತ ಕಾಲೇಜುಗಳ ಪ್ರಾಂಶುಪಾಲರುಗಳಿಗೆ.

ಪ್ರತಿಯನ್ನು:

1. ಮಾನ್ಯ ಉನ್ನತ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿಗಳಿಗೆ, ಕೊಠಡಿ ಸಂಖ್ಯೆ:242-243, 2ನೇ ಮಹಡಿ, ವಿಕಾಸಸೌಧ, ಬೆಂಗಳೂರು – 560 001.
2. ಡಾ. ಭದ್ರಾವತಿ ರಾಮಾಚಾರಿ, ಲೇಖಕರು ಮತ್ತು ಪ್ರಕಾಶಕರು, # 53, 5ನೇ ಟೆಂಪಲ್ ರಸ್ತೆ, ಸಿದ್ಧಾಂತಿ ಬ್ಲಾಕ್, ಮಲ್ಲೇಶ್ವರಂ, ಬೆಂಗಳೂರು- 560 003.
3. ಕಛೇರಿ ಪ್ರತಿ.
4. ಮಾಹಿತಿ ತಂತ್ರಜ್ಞಾನ ಅಧಿಕಾರಿಗಳು, ಕೇಂದ್ರ ಕಛೇರಿ, ಬೆಂಗಳೂರು (ಇಲಾಖಾ ವೆಬ್‌ಸೈಟ್‌ನಲ್ಲಿ ಅಳವಡಿಸಲು)